ನಡೆದರೆ ತನ್ನ ಮನೆ ಮುಟ್ಟುತ್ತಿದ್ದನೇನೋ ಅಷ್ಟರಲ್ಲಿ ಯಾವುದೋ ಹಕ್ಕಿ ಛಾಷ್ಟೀ ಮಾಡುವವರ ಥರ ಅವನ ನೆತ್ತಿಗೆ ಟಪ್ಪಂತ ರೆಕ್ಕೆ ಸೋಕಿಸಿ ಹೋಯಿತು. ಥಟ್ಟನೇ ತಲೆಮೇಲೆ ಕೈಯಾಡಿಸಿಕೊಂಡು ಕತ್ತು ಮೇಲೆತ್ತಿ ನೋಡಿದ. ಹಾಗೆ ರೆಕ್ಕೆ ಸೋಕಿಸಿದ್ದು ಪಕ್ಷಿ ಕಾಗೆಯಾಗಿತ್ತು. ಇದು ಭಾರೀ ಅಪಶಕುನವೆಂದು ಅವನ ಜಂಘಾಬಲವೇ ಉಡುಗಿ ಹೋಯಿತು. ದಾರಿಯುದ್ದಕ್ಕೂ ಏನೇನೋ ಕಲ್ಪಿಸಿಕೊಂಡು ಥಂಡಾ ಹೊಡೆದ. ಚಿಟ್ಟು ಹಿಡಿದಿದ್ದ ತಲೆಝಾಡಿಸಿದಾಗ ತನ್ನ ಹೃದಯಬಡಿತ ಜಾಸ್ತಿ ಆದಂತನಿಸಿ ಜೋರು ಬೆವರಿದ. ತನಗಿದು ಒಳ್ಳೆಯದಲ್ಲವೆಂದು ತನ್ನ ಮನೆಯ ಹೊಸ್ತಿಲ್ಲಲ್ಲೇ ನಿಂತುಕೊಂಡು 'ಮಂಜ್ಯಾ.. ಮಂಜ್ಯಾ' ಎಂದು ಮಗನನ್ನ ಕೂಗಿ ನೀರು ತರಿಸಿ ಮಾರಿ ತೊಳೆದು ತನ್ನಷ್ಟಕ್ಕೇ ತಾನೇ ಸುಧಾರಿಸಿಕೊಂಡು ಮನೆ ದೇವರನ್ನು ನೆನೆಯುತ್ತಾ ಒಳಹೋದ.



'ಅಪ್ಪಾ.. ಮುಂಜೇಲಿ ಪೊಲೀಸ್ರ ಬಂದಿದ್ರ. ಮನ್ಯಾನ ಮಂದಿ ದವಾಖಾನಿಗೆ ಹೋಗ್ಯರ್ರೀ ಅಂತ್ಹೇಳಿ ಕಳಿಸಿದ್ಯ' ಎಂಬ ಮಂಜನ ಮಾತನ್ನ ಕೇಳಿಯೂ ಕೇಳಿಸದಂತೆ ಸಂಕಪ್ಪ ಒಂದಕ್ಕೊಂದು ಸಿಕ್ಕಿಸಿಟ್ಟದ್ದ ನಾಲ್ಕೈದು ಫೈಬರ್ ಕುರ್ಚಿಯ ಮೇಲೆ ಕುಳಿತು 'ಉಸ್' ಎಂದು ನಿಟ್ಟುಸಿರುಬಿಟ್ಟ. ಮಂಜ ಅಪ್ಪನ ತನ್ನ ಮಾತಿನಡೆಗಿನ ನಿರಾಸಕ್ತಿ ಕಂಡು ಮರು ಮಾತಾಡಲಿಲ್ಲ. ಮನೆ ತುಂಬಾ ಸೂತಕದ ವಾತಾವರಣ ತಾಂಡವವಾಡುತ್ತಿತ್ತು. ಮನೆಯ ಶೃಂಗಾರಕ್ಕೆ ತಂದಿದ್ದ ಸಾಮಾನುಗಳು ಯಾರದೋ ದಾಳಿಗೆ ತುತ್ತಾದಂತೆ ಚೆಲ್ಲಾಪಿಲ್ಲಿಯಾಗಿದ್ದವು. ಸಂಕಪ್ಪ ಒಂದಷ್ಟು ಹೊತ್ತು ಶಾಂತಚಿತ್ತದಿಂದ ಕುಳಿತಿದ್ದವನು ಒಮ್ಮಿಂದೊಮ್ಮೆಲೇ ಖೋಲಿಯೊಳಗೆ ನುಗ್ಗಿದ.

ನಿನ್ನೆ ದಿನ ಯಶೋದಾ ಮಲಗಿದ್ದ ಹಾಸಿಗೆ ಮುದುಡಿಕೊಂಡಿದ್ದನ್ನು ಕಂಡು ಮನಸ್ಸಿಗೆ ಪಿಚ್ಚೆನಿಸಿ ಸರಿಪಡಿಸಲು ನೋಡಿದ. ಆಗ ಖಾಕಿ ಬಣ್ಣದ ಲಕೋಟೆಯೊಂದು ಸಿಕ್ಕಿತು. ಅದನ್ನು ಓದಬೇಕೆಂದು ಬೆರಗುಗಣ್ಣಿನಿಂದ ಕೈಗೆತ್ತಿಕೊಂಡ. ಆ ಕಾಗದ ಆಂಗ್ಲ ಭಾಷೆಯಲ್ಲಿರೋದನ್ನ ನೋಡಿ ಬೇಸರಿಸಿಕೊಂಡು ಮಡಚಿ ಕಿಸೆಯಲ್ಲಿರಿಸಿಕೊಂಡ. ಅಡುಗೆ ಮನೆಗೆ ತೆರಳಿ ಹಂಡೆಯಲ್ಲಿದ್ದ ನೀರನ್ನು ಚರಗಿಯಿಂದ ಮೊಗೆದು ಗಟಾಗಟಾ ನೀರು ಕುಡಿದ. ಹೊರಬಂದು ಫ್ಯಾನು ಹಚ್ಚಿಕೊಂಡು ಕುರ್ಚಿಯಲ್ಲಿ ಕುಳಿತು ಕೆಲಹೊತ್ತು ದಣಿವು ಆರಸಿಕೊಳ್ಳಲು ನೋಡಿದ. ಮತ್ತೇ ಆ ಕಾಗೆಯದ್ದು, ಯಶೋದಾಳದ್ದು ನೆನಪಾಗಿ ಒಂಥರ ಅಸಮಾಧಾನ ಉಂಟಾಯಿತು. ಕೊನೆಗೆ ತಾನು ಹುಬ್ಬಳ್ಳಿಗೆ ಹೋಗಬೇಕೆಂದು ನಿರ್ಧರಿಸಿ ಹೊರಟಾಗ ಸಣ್ಣಮಾರಿ ಮಾಡಿಕೊಂಡ ಕುಳಿತಿದ್ದ ಮಂಜನನ್ನ ಕಂಡು ಮರುಗಿದ. 'ಊಟ ಮಾಡಿಯನಪಾ?' ಅಂತ ಕೇಳಿದ. ಮಂಜ ಕೆಳದುಟಿ ಮುದುಡಿಸಿ ಗೋಣು ಅಲ್ಲಾಡಿಸಿದ. ಇದರಿಂದ ಸಂಕಪ್ಪನಿಗೆ ಹೊಟ್ಟೆಯಲ್ಲಿ ಖಾರ ಕಲಿಸಿದಂತಾಗಿ ತನ್ನದೆಯ ಕಿಸೆ ಕೈಯ್ಯಾಡಿಸಿಕೊಂಡು ಇದ್ದಿದ್ದ ಇಪ್ಪತ್ತರ ನೋಟು ಅವನ ಕೈಗಿಟ್ಟು ಹುಬ್ಬಳ್ಳಿಯಡೆಗೆ ನಡೆದ. ಈವರೆಗೂ ಹೊಟ್ಟೆಯಲ್ಲಿ ಚಿಟ್ಟೆ ಬಿಟ್ಟಂತಾಗಿ ಹೊಟ್ಟೆ ಹಸುವಿನಿಂದ ತಹ ತಹಿಸುತ್ತಿದ್ದ ಮಂಜ ಆ ಇಪ್ಪತ್ತರ ನೋಟು ಇಪ್ಪತ್ತು ಸಲ ಆಕಡೆ ಈಕಡೆ ತಿರುಗಿಸಿ ನೋಡುತ್ತಾ ತನ್ನ ಬಲಗಾಲು ಮಂಡಿಯ ಮೇಲೆ ಬಲಗೈ ಊರಿ ಕುಂಟುತ್ತಾ ಊರಿನ ಚಹಾದಂಗಡಿಯ ಕಡೆಗೆ ನಡೆದ.

ಆಸ್ಪತ್ರೆಯನ್ನು ಪ್ರವೇಶಿಸುತ್ತಲೇ ಸಂಕಪ್ಪನ ಎದೆಯಲ್ಲಿ ಒಂಥರಾ ನಡುಕ ಹುಟ್ಟಿತು. ಹೃದಯ ಯಥಾಸ್ಥಿತಿಯಲ್ಲಿ ಹೊಡೆದುಕೊಳ್ಳುತ್ತಿತ್ತಾದರೂ ಅವನಿಗಿರುವ ಆಂತಕಕ್ಕೆ ಅದು ಜಾಸ್ತಿ ಅನ್ನಿಸಿತ್ತು. 'ಬಡ್ಡಿಮಗಂದ ಹಾರ್ಟ ನಿಂತಬಿಡತ್ತೋ.. ಏನೋ...' ಅಂತ ಭಾವಿಸಿ ದಂಗುಬಡಿದ. ದೇಹ ಕ್ರಮೇಣ ಬೆಚ್ಚಗೆನಿಸಿ ಕಂಕುಳಗಳಲ್ಲಿ ಬೆವರು ಹನಿಯತೊಡಗಿತು. ಆಸ್ಪತ್ರೆಯ ಒಳಗಡೆ ಹೋಗಲು ಮನಸ್ಸು ಮಾಡದೇ ಹೊರಗಡೆಯೇ ಇದ್ದ ಸಿಮೆಂಟು ಕುರ್ಚಿಯ ಮೇಲೆ ಸ್ವಲ್ಪಹೊತ್ತು ಕುಳಿತ. ಆಮೇಲೆ ಅವರಿವರ ಬಳಿ ನೀರು ಕೇಳಿ ಒಂದಷ್ಟು ಗಂಟಲಿಗೆ ಹಣಿಸಿದ. ಇನ್ನಷ್ಟು ತಲೆಮೇಲೆ ಸುರಿದುಕೊಂಡ. ಆದರೂ ಆತನಿಗಿರುವ ಕಳವಳ ಬತ್ತಲಿಲ್ಲ. ಇನ್ನಷ್ಟು ಹೊತ್ತು ಅಲ್ಲೇ ಕುಳಿತು ಸುಧಾರಿಸಿಕೊಳ್ಳಲು ನೋಡಿದ. ಅಲ್ಲಿನ ಜನ, ನರ್ಸು, ಡಾಕ್ಟರ್ಸು, ಪೇಶಂಟ್ಸ್‌ಗಳನ್ನ ಕಂಡು ತಾನು